ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
KARNATAK UNIVERSITY DHARWAD
ಸಿಬ್ಬಂದಿ ಹಾಗೂ ಆಡಳಿತ ಸುಧಾರಣಾ ವಿಭಾಗ
D.P.A.R

"A" Grade NAAC Accredited 2008
"Diamond Jubilee Year 1949-2009"
"ವಜ್ರ ಮಹೋತ್ಸವ ವರ್ಷ 1949-2009"

ಪಾವಟೆನಗರ, ಧಾರವಾಡ.
Pavate Nagar, Dharwad.
ದೂರವಾಣಿ ಸಂ.2215349
Tel Ph. No.2215349
Website : www.kud.ac.in

ನಂ.ಕವಿವಿ/ಸಿಆಸುವಿ/ಶಿಕ್ಷಕೇತರ/10/2016/ 4209 ದಿನಾಂಕ : 13 OCT 2016

## ಸುತ್ತೋಲೆ

ವಿಷಯ : ಭಾರತ ಸಂವಿಧಾನ ಅನುಚ್ಛೇದ 371(ಜೆ) ಪ್ರಕಾರ ಮಾತೃ ವೃಂದದಿಂದ ಸ್ಥಳೀಯ ವೃಂದ ಬೇರ್ಪಡಿಸಿ ತಿದ್ದುಪಡಿ ಅಧಿಸೂಚನೆ ಹೊರಡಿಸಿದಂತೆ ಅರ್ಹ ನೌಕರರಿಂದ ಆಯ್ಕೆ ಪತ್ರ ಸಲ್ಲಿಸಲು ತಿಳಿಸುವ ಕುರಿತು.

ಉಲ್ಲೇಖ: 1) ಸರ್ಕಾರದ ಆದೇಶ ಸಂ.ಡಿಪಿಎಆರ್ 43 ಎಚ್‌ಕೆಸಿ 2013 ದಿನಾಂಕ: 29.01.2014.
2) ಈ ಕಚೇರಿ ಅಧಿಸೂಚನೆ ನಂ.1064 ದಿನಾಂಕ: 06.06.2014.
3) ಸಿಂಡಿಕೇಟ್ ನಿರ್ಣಯ ನಂ.41 ದಿನಾಂಕ: 02.07.2016.
4) ಈ ಕಚೇರಿ ತಿದ್ದುಪಡಿ ಅಧಿಸೂಚನೆ ನಂ.4042 ದಿನಾಂಕ: 01.10.2016.
5) ಕುಲಪತಿಗಳ ಆದೇಶ ದಿನಾಂಕ: 06-10-2016

ಭಾರತ ಸಂವಿಧಾನ ಅನುಚ್ಛೇದ 371(ಜೆ) ಪ್ರಕಾರ ಮಾತೃ ವೃಂದದಿಂದ ಸ್ಥಳೀಯ ವೃಂದ ಬೇರ್ಪಡಿಸಿ ತಿದ್ದುಪಡಿ ಅಧಿಸೂಚನೆ ಹೊರಡಿಸುವ ಕುರಿತು ಉಲ್ಲೇಖ-2 ರಲ್ಲಿ ಕಾಣಿಸಿದಂತೆ ಅಧಿಸೂಚನೆ ಪ್ರಕಾರ ಅರ್ಹ ನೌಕರರು ಮಾತೃ ವೃಂದದಿಂದ ಸ್ಥಳಿಯ ವೃಂದಕ್ಕೆ ಸೇರಬಯಸುವವರು ಆಯ್ಕೆ ಪತ್ರ ಸಲ್ಲಿಸಿರುತ್ತಾರೆ. ಈಗ ಉಲ್ಲೇಖ-3 ರಲ್ಲಿ ಕಾಣಿಸಿದಂತೆ ಸಿಂಡಿಕೇಟ್ ಸಭೆಯು ಭಾರತ ಸಂವಿಧಾನ ಅನುಚ್ಛೇದ 371(ಜೆ) ಪ್ರಕಾರ ಕ್ರಮ ವಹಿಸಲು ಶಿಫಾರಸ್ಸು ಮಾಡಿರುತ್ತದೆ.

ಅದರಂತೆ, ಮಾತೃ ವೃಂದದಿಂದ ಸ್ಥಳೀಯ ವೃಂದ ಬೇರ್ಪಡಿಸಿ ಒಪ್ಪಿಗೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅದಕ್ಕೆ ಸೂಕ್ತ ಮಾರ್ಪಾಡಿನೊಂದಿಗೆ ಅನುಮೋದನೆ ದೊರಕಿರುತ್ತದೆ. ಅದರಂತೆ, ಕೆಲವು ಮಾರ್ಪಾಡುಗಳೊಂದಿಗೆ ಮಾತೃ ವೃಂದದಿಂದ ಸ್ಥಳೀಯ ವೃಂದ ಬೇರ್ಪಡಿಸಿ ತಿದ್ದುಪಡಿ ಅಧಿಸೂಚನೆಯನ್ನು ಉಲ್ಲೇಖ-4 ರಲ್ಲಿ ಕಾಣಿಸಿದಂತೆ ಹೊರಡಿಸಿ ಮಾಹಿತಿಯನ್ನು ಕ.ವಿ.ವಿ. ವೆಬ್‌ಸೈಟ್ www.kud.ac.in ದಲ್ಲಿ ಪ್ರಕಟಿಸಲಾಗಿದೆ.

ಈಗಾಗಲೇ ಆಯ್ಕೆ ಪತ್ರ ಸಲ್ಲಿಸಿದವರನ್ನು ಹೊರತುಪಡಿಸಿ ಸ್ಥಳೀಯ ವೃಂದಕ್ಕೆ ಸೇರ ಬಯಸುವವರು, ದಿನಾಂಕ: 01.01.2013 ಕ್ಕಿಂತ ಮುಂಚಿತವಾಗಿ ನೇಮಕಾತಿ ಹೊಂದಿದ್ದಲ್ಲಿ ಅವರ ಸೇವಾ ಪುಸ್ತಕದಲ್ಲಿ ಸ್ವಗ್ರಾಮ ದಾಖಲಾತಿಗೊಂಡಿದ್ದಲ್ಲಿ, ಅಂಥವರು ಈ ಸುತ್ತೋಲೆ ಹೊರಡಿಸದ 7 ದಿನಗಳೊಳಗಾಗಿ ಆಯ್ಕೆ ಪತ್ರವನ್ನು ಸಲ್ಲಿಸುವುದು. ದಿನಾಂಕ: 01.01.2013 ರ ನಂತರ ನೇಮಕಾತಿ ಹೊಂದಿದವರು ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಸ್ವಗ್ರಾಮ (ಅರ್ಹತಾ) ಪ್ರಮಾಣ ಪತ್ರದೊಂದಿಗೆ ಆಯ್ಕೆ ಪತ್ರ ಸಲ್ಲಿಸುವುದು.

ಮೇಲ್ಕಾಣಿಸಿದ ವಿಷಯವನ್ನು ಈ ಮೂಲಕ ಸಂಬಂಧಿಸಿದ ನೌಕರರ ಗಮನಕ್ಕೆ ತರಲಾಗಿದೆ.

ಕುಲಸಚಿವರು
7.10

ಗೆ,
1. ಕುಲಸಚಿವರು (ಮೌ.ಮಾ), ಕ.ವಿ.ವಿ. ಧಾರವಾಡ.
2. ಹಣಕಾಸು ಅಧಿಕಾರಿಗಳು, ಕ.ವಿ.ವಿ. ಧಾರವಾಡ.
3. ಗ್ರಂಥಪಾಲಕರು, ಪ್ರೊ.ಶಿ.ಶಿ.ಬಸವನಾಳ ಗ್ರಂಥಾಲಯ, ಕ.ವಿ.ವಿ. ಧಾರವಾಡ.
4. ವೈದ್ಯಾಧಿಕಾರಿಗಳು, ಕ.ವಿ.ವಿ. ಆರೋಗ್ಯ ಕೇಂದ್ರ, ಧಾರವಾಡ.
5. ಎಲ್ಲಾ ನಿರ್ದೇಶಕರು/ಸಂಯೋಜಕರು/ನೋಡಲ್ ಅಧಿಕಾರಿಗಳು/ಮಾಹಿತಿ ತಂತ್ರಜ್ಞಾನ ವಿಭಾಗ, ಕ.ವಿ.ವಿ. ಧಾರವಾಡ.
6. ಎಲ್ಲಾ ಮುಖ್ಯಸ್ಥರು/ಕೋ-ಆರ್ಡಿನೇಟರರ್ಸ್, ಎಲ್ಲಾ ಸ್ನಾತಕೋತ್ತರ ವಿಭಾಗಗಳು, ಕ.ವಿ.ವಿ. ಧಾರವಾಡ/ಕಾರವಾರ/ಹಾವೇರಿ/ಗದಗ.
7. ಆಡಳಿತ ವಿಭಾಗದ ಎಲ್ಲಾ ಮುಖ್ಯಸ್ಥರುಗಳಿಗೆ.
8. ಪ್ರಾಚಾರ್ಯರು, ಎಲ್ಲಾ ಘಟಕ ಮಹಾವಿದ್ಯಾಲಯಗಳು/ಯು.ಪಿ.ಎಸ್. ಧಾರವಾಡ.
9. ಸ್ಥಾನಿಕ ಅಭಿಯಂತರರು, ಕಟ್ಟಡ ವಿಭಾಗ, ಕ.ವಿ.ವಿ. ಧಾರವಾಡ.
10. ವಿಶೇಷಾಧಿಕಾರಿಗಳು, ಪ್ರವರ್ಗ-1, ಅಲ್ಪಸಂಖ್ಯಾತರ ಹಾಗೂ ಹಿಂದುಳಿದ ವರ್ಗಗಳ ವಿಭಾಗ, ಕ.ವಿ.ವಿ. ಧಾರವಾಡ.
11. ಮುಖ್ಯಾಧ್ಯಾಪಿಕೆಯರು, ಪ್ರಾ.ಪ್ರಾ, ಕನ್ನಡ ಶಾಲೆ, ಕ.ವಿ.ವಿ. ಧಾರವಾಡ.

ಮುಂದುವರೆದು, ಮೇಲ್ಕಾಣಿಸಿದ ಸುತ್ತೋಲೆಯಲ್ಲಿನ ವಿಷಯವನ್ನು ಸಂಬಂಧಿಸಿದ ಎಲ್ಲ ನೌಕರರ ಗಮನಕ್ಕೆ ತರಲು ಹಾಗೂ ಸೂಚನಾ ಫಲಕಕ್ಕೆ ಲಗತ್ತಿಸಲು ಈ ಮೂಲಕ ತಿಳಿಸಲಾಗಿದೆ.